ದಿನಾಂಕ 22.06.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 2, 3 ಮತ್ತು 5 ನೇ ಪ್ರತಿವಾದಿಗಳ ಪರ ಶ್ರೀ ಬಿ.ವಿ.ಎಲ್., ವಕೀಲರಿಂದಃ-

6. ವಾದಪತ್ರದಲ್ಲಿ ಹೇಳಿರುವ ಸ್ವತ್ತುಗಳ ವಿಸ್ತೀರ್ಣ, ಚಕ್ಕುಬಂದಿ ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಪಹಣಿಗಳನ್ನು ನಾನೇ ಪಡೆದುಕೊಂಡು ಬಂದಿದ್ದೇನೆ. ಯಾರ ಯಾರ ಹೆಸರಿನಲ್ಲಿ ಎಷ್ಟೆಷ್ಟು ಎಕರೆ ವಿಸ್ತೀರ್ಣ ಪಹಣಿಯಲ್ಲಿ ನಮೂದಿದೆ ಎಂದು ಗೊತ್ತಿಲ್ಲ. ದಿನಾಂಕ 02.12.1982 ರ ವಿಭಾಗ ಪತ್ರದಂತೆ ಅವರವರ ಹೆಸರಿಗೆ ಪ್ರತ್ಯೇಕವಾಗಿ ಖಾತೆ ಬರುತ್ತಿದೆ ಎಂದರೆ ಸಾಕ್ಷಿಯು ನಾನು ವಿಭಾಗದಲ್ಲಿ ಸೇರಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಇದ್ದಾಗಲೇ ವಿಭಾಗ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ವಿಭಾಗ ಪತ್ರದಲ್ಲಿ ಏನಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಪತ್ರ ಮಾಡಿರುವುದೇ ನಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಪತ್ರದಲ್ಲಿ ನಾನು ಮೇಲೆ ಹೇಳಿದ ವಿಭಾಗ ಪತ್ರದ ಬಗ್ಗೆ ಬರೆಸಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ವಾದಪತ್ರದಲ್ಲಿ ಬರೆದಿರುವುದು ಸುಳ್ಳಾ ಎಂದರೆ ಸಾಕ್ಷಿಯು ಏನು ಬರೆದಿದೆ ಎಂದು ಹೇಳಿದರೆ ಹೇಳುತ್ತೇನೆ ಎಂದು ನುಡಿಯುತ್ತಾರೆ. ಪಂಚಾಯಿತಿ ಪಾರಿಕತ್‌ನ ಬಗ್ಗೆ ವಾದಪತ್ರದಲ್ಲಿ ಬರೆಸಿರುವುದು ಸುಳ್ಳಾ ಎಂದರೆ ಸಾಕ್ಷಿಯು ನಾನು ಪಂಚಾಯಿತಿ ಪಾರಿಕತ್ ಬಗ್ಗೆ ಬರೆಸಿಲ್ಲ ಎಂದು ನುಡಿಯುತ್ತಾರೆ.

7. ನನ್ನ ತಂದೆ ತೀರಿಕೊಂಡು 23 ರಿಂದ 24 ವರ್ಷಗಳಾಗಿವೆ.

ತೀರಿಕೊಂಡ ದಿನಾಂಕ, ತಿಂಗಳು ಗೊತ್ತಿಲ್ಲ. ನನ್ನ ತಂದೆಯ ಮರಣ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ತಾಯಿ ನಾನು ಚಿಕ್ಕವಳಿದ್ದಾಗಲೇ ತೀರಿಕೊಂಡರು. ನನ್ನ ತಾಯಿಯ ಮರಣ ಪ್ರಮಾಣಪತ್ರ ಪಡೆದುಕೊಂಡಿಲ್ಲ. ಕೃಷ್ಣಪ್ಪ ನನ್ನ ಅಣ್ಣ. ಅವರು ತೀರಿಕೊಂಡು 13 ವರ್ಷಗಳಾಗಿವೆ. ಅವರ ಹೆಂಡತಿ ಸಾವಿತ್ರಮ್ಮ. ಅವರ ಮಕ್ಕಳು ಕುಸುಮ, ಶಶಿಕಲಾ, ಶ್ರೀನಿವಾಸ. ಅವರನ್ನು ಈ ದಾವೆಯಲ್ಲಿ ಪಾರ್ಟಿಯಾಗಿ ಮಾಡಿಲ್ಲ.

8. ವಂಶವೃಕ್ಷವನ್ನು ನಾನೇ ಪಡೆದುಕೊಂಡು ಬಂದಿದ್ದೇನೆ. ನಿಪಿ-1 ನ್ನು ರೆವಿನ್ಯೂ ಸೆಕ್ರೆಟರಿಯವರಿಂದ ಪಡೆದುಕೊಂಡೆವು. ನಿಪಿ-1 ರಲ್ಲಿ ವೆಂಕಟರಮಣ ಎಂಬುವವರು ತೆಗದುಕೊಂಡಿದ್ದಾರೆ ಎಂದು ಬರೆದಿದೆ ಎಂದರೆ ಸಾಕ್ಷಿಯು ರೆವಿನ್ಯೂ ಸೆಕ್ರೆಟರಿಯವರು ನೀವು ಊರಿನಲ್ಲಿ ವಾಸವಿರುವ ಬಗ್ಗೆ ಸಾಕ್ಷಿದಾರರ ಸಹಿ ಬೇಕು ಎಂದು ಹೇಳಿದರು, ಅದಕ್ಕೆ ಸಾಕ್ಷಿದಾರರು ಸಹಿ ಹಾಕಿದ್ದಾರೆ ಎಂದು ನುಡಿಯುತ್ತಾರೆ. ನಿಪಿ-1 ವಂಶವೃಕ್ಷಕ್ಕೆ ಮಾಹಿತಿ ಕೊಟ್ಟದ್ದು ನಾನೇ. ನಿಪಿ-1 ರಲ್ಲಿ ಕೃಷ್ಣಪ್ಪನ ಹೆಂಡತಿ ಮಕ್ಕಳ ಹೆಸರನ್ನು ಬರೆಸಿಲ್ಲ. ನಿಪಿ-1 ವಂಶವೃಕ್ಷ ಪಡೆದುಕೊಳ್ಳುವ ಕಾಲಕ್ಕೆ ನನ್ನ ಅಣ್ಣ ಕೃಷ್ಣಪ್ಪ ತೀರಿಕೊಂಡಿದ್ದರು. ನಿಪಿ-7 ರಲ್ಲಿ ವಿಭಾಗದಂತೆ ಖಾತೆಯಾಗಿದೆ ಎಂದು ಬರೆದಿದ್ದಾರೆ ಎಂದರೆ ನಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-7 ರಲ್ಲಿ ಯಾರು ಯಾರಿಗೆ, ಯಾವ ಸರ್ವೇ ನಂಬರ್, ಎಷ್ಟು ವಿಸ್ತೀರ್ಣ ಎಂದು ಬರೆದಿದೆ. ನಿಪಿ-8 ರಂತೆ ಕೃಷ್ಣಪ್ಪನ ಮರಣಾ ನಂತರ ಸಾವಿತ್ರಮ್ಮನವರಿಗೆ ಪೌತಿ ಖಾತೆ ಆಗಿದೆ ಎಂದರೆ ಸಾಕ್ಷಿಯು ಮಾಡಿಕೊಂಡಿರಬಹುದು ಎಂದು ನುಡಿಯುತ್ತಾರೆ. ನಿಪಿ-9 ರಲ್ಲಿ ತೋಟಿ ಮೂಡಲಯ್ಯ ಎಂದು ಇದೆ ನಿಮ್ಮ ತಂದೆಯ ಹೆಸರು ಇಲ್ಲ

ಎಂದರೆ ಸಾಕ್ಷಿಯು ನಮ್ಮ ತಂದೆಯ ಹೆಸರು ಮೂಡಲಯ್ಯ, ತಾತನ ಹೆಸರು ಸಹ ಮೂಡಲಯ್ಯ ಎಂದು ನುಡಿಯುತ್ತಾರೆ. ಇಬ್ಬರ ಹೆಸರೂ ಮೂಡಲಯ್ಯ ಎಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ, ಅದು ವಂಶವೃಕ್ಷ. ನಿಪಿ-1 ರಲ್ಲಿ ನನ್ನ ತಾತ ಮೂಡಲಯ್ಯರವರ ಹೆಸರು ಇಲ್ಲ ಎಂದರೆ ನನಗೆ ಓದಲು ಬರುವುದಿಲ್ಲ. ನಿಪಿ-10 ರಿಂದ ನಿಪಿ-12 ಪ್ರತಿವಾದಿಗಳ ಹೆಸರಿನಲ್ಲಿದೆ ಎಂದರೆ ಸರಿ.

9. ನಿಪಿ-13 ನೋಟಿಸ್‌ನಲ್ಲಿ ಏನು ಬರೆದಿದೆ ಎಂದು ಗೊತ್ತಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೋಟಿಸ್‌ಗೆ ಜವಾಬು ಬಂದಿದೆ ಎಂದರೆ ಇಲ್ಲ. ನಿಮ್ಮೆಲ್ಲರ ಮದುವೆಯನ್ನು ನಿಮ್ಮ ಅಣ್ಣ ತಮ್ಮಂದಿರೇ ಮಾಡಿದ್ದು ಎಂದರೆ ಸಾಕ್ಷಿಯು ನಮ್ಮ ತಂದೆಯೇ ಮಾಡಿದ್ದು ಎಂದು ನುಡಿಯುತ್ತಾರೆ. ನಮ್ಮ ತಂದೆ ಇದ್ದಾಗಲೇ ಎಲ್ಲರ ಮದುವೆಯಾಗಿತ್ತು. ದಾವಾ ಸ್ವತ್ತುಗಳು ಪ್ರತಿವಾದಿಗಳಿಗೆ ಗ್ರ್ಯಾಂಟ್ ಮುಖಾಂತರ ಬಂದವು ಎಂದರೆ ಸರಿಯಲ್ಲ. ಅದರಂತೆ ಪ್ರತಿವಾದಿಗಳು ಹಂಚಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳಲ್ಲ, ಒಟ್ಟು ಕುಟುಂಬದ ಸ್ವತ್ತುಗಳಲ್ಲ, ಅವುಗಳಲ್ಲಿ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಒಟ್ಟು ಕುಟುಂಬದ ಸ್ವತ್ತುಗಳು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನನಗೆ ಏನೂ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.